**ಕರ್ನಾಟಕ ಸರ್ಕಾರ**

**ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ**

ಆಯುಕ್ತರ ಕಛೇರಿ, ನಂ.16–ಡಿ, 3ನೇ ಮಹಡಿ, ಡಿ. ದೇವರಾಜ ಅರಸು ಭವನ, ಮಿಲ್ಲರ್ಸ್ ಟ್ಯಾಂಕ್ ಬೆಡ್ ಏರಿಯಾ, ವಸಂತನಗರ, ಬೆಂಗಳೂರು–52.

ಸಂ: BCWD-16013/13/2017-BCWD_TRAINING-BCWD ದಿನಾಂಕ: 17.08.2017

**ಐ.ಎ.ಎಸ್./ಕೆ.ಎ.ಎಸ್. ಪರೀಕ್ಷಾ ಪೂರ್ವ ತರಬೇತಿ – 2017–18**

**3ನೇ ಸುತ್ತಿನ ಮೂಲ ದಾಖಲೆಗಳ ಪರಿಶೀಲನೆ/ಕೌನ್ಸಿಲಿಂಗ್‌ಗೆ ಹಾಜರಾಗುವ ಅಭ್ಯರ್ಥಿಗಳಿಗೆ ಸೂಚನೆಗಳು**

1. ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಿಂದ ಯಾವುದಾದರೂ ಅಭ್ಯರ್ಥಿಗಳು ಈ ಹಿಂದೆ ಯಾವುದೇ ಸ್ಪರ್ಧಾತ್ಮಕ ಪರೀಕ್ಷೆಗಳ ಪರೀಕ್ಷಾ ಪೂರ್ವ ತರಬೇತಿಗೆ ಆಯ್ಕೆಯಾಗಿದ್ದರೆ/ತರಬೇತಿಯನ್ನು ಪಡೆದಿದ್ದರೆ, ಅಂತಹ ಅಭ್ಯರ್ಥಿಗಳು ಪುನಃ ಪರೀಕ್ಷಾ ಪೂರ್ವ ತರಬೇತಿಗೆ ಅರ್ಹರಿರುವುದಿಲ್ಲ.

2. ಕೇಂದ್ರ/ರಾಜ್ಯ ಸರ್ಕಾರ/ಅನುದಾನಿತ ಸಂಸ್ಥೆಗಳು/ಸಾರ್ವಜನಿಕ ಸ್ವಾಮ್ಯತೆಗೆ ಒಳಪಟ್ಟ ಸಂಸ್ಥೆಗಳಲ್ಲಿನ ನೌಕರರು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಿಂದ ನೀಡುವ ಪರೀಕ್ಷಾ ಪೂರ್ವ ತರಬೇತಿಗೆ ಅರ್ಹರಿರುವುದಿಲ್ಲ.

3. ಮೂಲ ದಾಖಲೆಗಳನ್ನು ಪರಿಶೀಲನೆ ಮಾಡುವ ದಿನಾಂಕ ಮತ್ತು ಸಮಯ ಮತ್ತು ಹಾಜರಾಗಬೇಕಾದ ಪ್ರವರ್ಗವಾರು ಅರ್ಹ ಅಭ್ಯರ್ಥಿಗಳ ವಿವರ.

| ದಿನಾಂಕ | ಸಮಯ | ಪ್ರವರ್ಗ |
|---|---|---|
| 23.08.2017 (ಬುಧವಾರ) | ಬೆಳಗ್ಗೆ 09.00 ರಿಂದ | ಮೂಲ ದಾಖಲೆಗಳ ಪರಿಶೀಲನೆಗೆ ಕರೆದಿರುವ ಪ್ರವರ್ಗ–1, 2ಎ, 3ಎ ಮತ್ತು 3ಬಿ ಯ ತಾತ್ಕಾಲಿಕ ಪಟ್ಟಿಯಲ್ಲಿನ ಅಭ್ಯರ್ಥಿಗಳು ಮಾತ್ರ |

4. ಸದರಿ ದಿನಾಂಕದಂದು ಐ.ಎ.ಎಸ್/ಕೆ.ಎ.ಎಸ್. ಪರೀಕ್ಷಾ ಪೂರ್ವ ತರಬೇತಿಗೆ 1 ಮತ್ತು 2ನೇ ಸುತ್ತಿನ ನಂತರ ಲಭ್ಯವಿರುವ ರಿಕ್ತ ಸ್ಥಾನಗಳಿಗಾಗಿ ಅಭ್ಯರ್ಥಿಗಳ ಮೂಲ ದಾಖಲೆಗಳ ಪರಿಶೀಲನೆ ಮತ್ತು ಕೌನ್ಸಿಲಿಂಗ್ ನಡೆಸಲಾಗುವುದು.

5. ನಿಗದಿಪಡಿಸಿರುವ ದಿನಾಂಕದಂದು ಬೆಳಗ್ಗೆ 09.00 ಗಂಟೆಗೆ ಮೂಲ ದಾಖಲೆಗಳ ಪರಿಶೀಲನೆ ಹಾಗೂ ತರಬೇತಿ ಸಂಸ್ಥೆಯ ಆಯ್ಕೆಗೆ ನಡೆಸುವ ಕೌನ್ಸಿಲಿಂಗ್ ಅನ್ನು ಪ್ರಾರಂಭಿಸುವ ಕಾರಣ ತಡವಾಗಿ ಬರುವ ಅಭ್ಯರ್ಥಿಗಳಿಗೆ ಜ್ಯೇಷ್ಠತೆಯನ್ನು ಕಾಯ್ದಿರಿಸಲಾಗುವುದಿಲ್ಲ.

6. ಅಭ್ಯರ್ಥಿಗಳ ಮೂಲ ದಾಖಲೆಗಳನ್ನು ಪರಿಶೀಲನೆ ಮಾಡುವ ಸ್ಥಳ:

ಆಯುಕ್ತರ ಕಛೇರಿ,
ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ,
ನಂ. 16–ಡಿ, ಡಿ.ದೇವರಾಜ ಅರಸು ಭವನ,
ಮಿಲ್ಲರ್ಸ್ ಟ್ಯಾಂಕ್‌ಬೆಡ್ ಏರಿಯಾ,
ವಸಂತ ನಗರ (ಡಾ: ಅಂಬೇಡ್ಕರ್ ಭವನದ ಹಿಂಭಾಗ),
ಬೆಂಗಳೂರು–560 052.

7. ಐ.ಎ.ಎಸ್/ಕೆ.ಎ.ಎಸ್. ಪರೀಕ್ಷಾ ಪೂರ್ವ ತರಬೇತಿಗೆ ಪ್ರವರ್ಗವಾರು ಲಭ್ಯವಿರುವ ಸ್ಥಾನಗಳ ವಿವರವನ್ನು ಇಲಾಖಾ ವೆಬ್‌ಸೈಟ್ www.backwardclasses.kar.nic.in ನಲ್ಲಿ ಪ್ರಕಟಿಸಲಾಗಿದೆ.
8. ದಿನಾಂಕ: 25.06.2017 ರಂದು ನಡೆದ ಸಾಮಾನ್ಯ ಪ್ರವೇಶ ಪರೀಕ್ಷೆಯಲ್ಲಿ ಅಭ್ಯರ್ಥಿಗಳು ಗಳಿಸಿರುವ ಅಂಕಗಳ ಆಧಾರದ ಮೇಲೆ, ಮೂಲ ದಾಖಲೆಗಳ ಪರಿಶೀಲನೆಗೆ ಹಾಜರಾಗಬೇಕಾದ ಮೆರಿಟ್/ಮಹಿಳೆ/ವಿಶೇಷಚೇತನ ಅಭ್ಯರ್ಥಿಗಳ ಪ್ರವರ್ಗವಾರು ಪಟ್ಟಿಗಳನ್ನು ಇಲಾಖಾ ವೆಬ್‌ಸೈಟ್ www.backwardclasses.kar.nic.in ನಲ್ಲಿ ಪ್ರಕಟಿಸಲಾಗಿದೆ. ಐ.ಎ.ಎಸ್. ಪರೀಕ್ಷಾ ಪೂರ್ವ ತರಬೇತಿಗೆ ಲಭ್ಯವಿರುವ ಸ್ಥಾನಗಳಿಗಿಂತ ಸ್ವಲ್ಪ ಹೆಚ್ಚಿನ ಸಂಖ್ಯೆಯಲ್ಲಿ ಅಭ್ಯರ್ಥಿಗಳನ್ನು ಮೂಲ ದಾಖಲೆಗಳ ಪರಿಶೀಲನೆಗೆ ಕರೆದಿದ್ದು, ಅಂತಹ ಹೆಚ್ಚುವರಿ ಅಭ್ಯರ್ಥಿಗಳನ್ನು ಕಾಯ್ದಿರಿಸಿದ ಅಭ್ಯರ್ಥಿಗಳೆಂದು ಪರಿಗಣಿಸಲಾಗುವುದು. ಅಭ್ಯರ್ಥಿಗಳು ತರಬೇತಿ ಸಂಸ್ಥೆಯನ್ನು ಆಯ್ಕೆ ಮಡಿಕೊಳ್ಳಲು ನಡೆಸುವ ಕೌನ್ಸಿಲಿಂಗ್‌ನಲ್ಲಿ ಪ್ರವರ್ಗವಾರು ಮೆರಿಟ್, ಮೀಸಲಾತಿ ಆಧಾರದ ಮೇಲೆ ಆದ್ಯತೆ ನೀಡಲಾಗುವುದು. ಲಭ್ಯವಿರುವ ಸ್ಥಾನಗಳು ಭರ್ತಿಯಾದ ನಂತರ ಕೌನ್ಸಿಲಿಂಗ್ ಅನ್ನು ನಿಲ್ಲಿಸಲಾಗುವುದು. ಆದ್ದರಿಂದ ತಾತ್ಕಾಲಿಕ ಆಯ್ಕೆ ಪಟ್ಟಿಯಲ್ಲಿರುವ (ಹೆಚ್ಚು ಅಂಕಗಳಿಸಿರುವ) ಅಭ್ಯರ್ಥಿಗಳು ಗೈರು ಹಾಜರಾದಲ್ಲಿ ಅಥವಾ ಸಂಸ್ಥೆಯನ್ನು ಆಯ್ಕೆ ಮಾಡಿಕೊಳ್ಳದೇ ಸ್ಥಾನಗಳು ಖಾಲಿ ಉಳಿದಲ್ಲಿ ಮಾತ್ರ ಕಾಯ್ದಿರಿಸಿ ಪಟ್ಟಿಯಲ್ಲಿನ ಅಭ್ಯರ್ಥಿಗಳಿಗೆ ತರಬೇತಿ ಸಂಸ್ಥೆಯ ಆಯ್ಕೆಗಾಗಿ ನಡೆಸುವ ಕೌನ್ಸಿಲಿಂಗ್‌ಗೆ ಅವಕಾಶ ನೀಡಲಾಗುವುದು.
9. ನಿಗದಿಪಡಿಸಿರುವ ದಿನಾಂಕದಂದೇ ಸಂಬಂಧಪಟ್ಟ ಅಭ್ಯರ್ಥಿಯು ಮೂಲ ದಾಖಲೆಗಳ ಪರಿಶೀಲನೆಗೆ ಖುದ್ದು ಹಾಜರಾಗಬೇಕು. ಮೂಲ ದಾಖಲೆಗಳ ಪರಿಶೀಲನೆಗೆ ಅಭ್ಯರ್ಥಿಯ ಪರವಾಗಿ ಬೇರೆ ಯಾರೂ ಹಾಜರಾಗಲು ಅವಕಾಶವಿರುವುದಿಲ್ಲ.
10. ನಿಗದಿತ್ಕ ದಿನಾಂಕದಂದು ಮೂಲ ದಾಖಲೆಗಳ ಪರಿಶೀಲನೆಗೆ ಹಾಜರಾಗದ ಅಭ್ಯರ್ಥಿಗಳನ್ನು ನಂತರ ತರಬೇತಿಯ ಆಯ್ಕೆಗೆ ಪರಿಗಣಿಸಲಾಗುವುದಿಲ್ಲ.
11. ಅಭ್ಯರ್ಥಿಯು ಪರಿಶೀಲನೆಗೆ ಹಾಜರುಪಡಿಸಬೇಕಾದ ದಾಖಲೆಗಳ ವಿವರವನ್ನು ಈ ಕೆಳಗೆ ನೀಡಿದ್ದು, ನಿಗದಿತ ದಿನಾಂಕ, ಸಮಯ ಮತ್ತು ಸ್ಥಳಕ್ಕೆ ಮೂಲ ದಾಖಲೆಗಳು ಹಾಗೂ ಅವುಗಳ ಒಂದು ಸೆಟ್ ದೃಢೀಕೃತ ಪ್ರತಿಯೊಂದಿಗೆ ಅಭ್ಯರ್ಥಿಗಳು ಖುದ್ದು ಹಾಜರಾಗುವುದು.
12. <u>ಅಭ್ಯರ್ಥಿಯು ಪರಿಶೀಲನೆಗೆ ಹಾಜರುಪಡಿಸಬೇಕಾದ ದಾಖಲೆಗಳು:</u>
    a. ಅಭ್ಯರ್ಥಿ ಸಲ್ಲಿಸಿರುವ ಆನ್‌ಲೈನ್ ಅರ್ಜಿ ಪ್ರತಿ.
    b. ಎಸ್.ಎಸ್.ಎಲ್.ಸಿ. ಅಂಕಪಟ್ಟಿ,
    c. ಪದವಿ ಪ್ರಮಾಣ ಪತ್ರ (Convocation Certificate or Provisional Degree Certificate).
    d. ಅಭ್ಯರ್ಥಿಯು ಹೆಸರಿನಲ್ಲಿ ಪಡೆದ ಜಾತಿ ಮತ್ತು ಆದಾಯ ದೃಢೀಕರಣ ಪತ್ರ (ತಹಶೀಲ್ದಾರರಿಂದ ಪಡೆದಿರಬೇಕು)
    e. ಅಭ್ಯರ್ಥಿಯ ಆಧಾರ್ ಕಾರ್ಡ್.
    f. ವಿಶೇಷ ಚೇತನ ಅಭ್ಯರ್ಥಿಗಳಾಗಿದ್ದಲ್ಲಿ ಮಾತ್ರ--ಅಂಗೀಕೃತ ಪ್ರಾಧಿಕಾರದಿಂದ ಪಡೆದಿರುವ ಪ್ರಮಾಣ ಪತ್ರ.
    g. ಆನ್‌ಲೈನ್ ಅರ್ಜಿಯಲ್ಲಿ ನಮೂದಿಸಿರುವಂತೆ ಯಾವುದಾದರೂ ರಾಷ್ಟ್ರೀಕೃತ ಬ್ಯಾಂಕ್‌ನಲ್ಲಿ ಅಭ್ಯರ್ಥಿಯ ಹೆಸರಿನಲ್ಲಿರುವ ಬ್ಯಾಂಕ್ ಖಾತೆ ಸಂಖ್ಯೆ, ಐ.ಎಫ್.ಎಸ್.ಸಿ. ಕೋಡ್, ಶಾಖೆಯ ಹೆಸರು ಇತ್ಯಾದಿ ವಿವರ ಹೊಂದಿರುವ ಬ್ಯಾಂಕ್ ಪಾಸ್ ಬುಕ್‌ನ ಪುಟದ ಜೆರಾಕ್ಸ್ ಪ್ರತಿ.

h. ವೆಬ್‌ಸೈಟ್‌ನಲ್ಲಿ ಪ್ರಕಟಿಸಿರುವ ಮುಚ್ಚಳಿಕೆ ಪತ್ರದ ವಿವರ ಹಾಗೂ ನಿಬಂಧನೆಗಳನ್ನು ರೂ.20/- ರ ಛಾಪಾ ಕಾಗದದಲ್ಲಿ ಅಭ್ಯರ್ಥಿ ಹಾಗೂ ಪೋಷಕರ ಸಹಿಯೊಂದಿಗೆ ಹಾಗೂ ದಿನಾಂಕ ನಮೂದಿಸಿರುವ ಮುಚ್ಚಳಿಕೆ ಪತ್ರದ ಮೂಲ ಪ್ರತಿ (Original) ಯನ್ನು ಸಲ್ಲಿಸುವುದು.

i. ಪಾಸ್‌ಪೋರ್ಟ್ ಅಳತೆಯ ಅಭ್ಯರ್ಥಿಯ ಇತ್ತೀಚಿನ 3 ಭಾವಚಿತ್ರಗಳ ಹಿಂದೆ ಅಭ್ಯರ್ಥಿಯು ತನ್ನ ಹೆಸರು, ಪ್ರವರ್ಗ, ತರಬೇತಿಯ ಹೆಸರು (IAS/KAS) ಮತ್ತು ವರ್ಷ (2017-18) ಗಳ ವಿವರವನ್ನು ನಮೂದಿಸಿ ನೀಡುವುದು.

13. ದಾಖಲೆಗಳನ್ನು ಪರಿಶೀಲಿಸಿದ ನಂತರ, ಎಲ್ಲಾ ಮೂಲ ದಾಖಲೆಗಳನ್ನು ಅಭ್ಯರ್ಥಿಗಳಿಗೆ ಸ್ಥಳದಲ್ಲೇ ಹಿಂದಿರುಗಿಸಲಾಗುವುದು (ರೂ.20/- ರ ಛಾಪಾ ಕಾಗದದ ಮುಚ್ಚಳಿಕೆ ಪತ್ರದ ಮೂಲ ಪ್ರತಿಯನ್ನು ಹೊರತುಪಡಿಸಿ). ಆದ್ದರಿಂದ ಈ ಕಛೇರಿಯ ಸಿಬ್ಬಂದಿಗಳು ದಾಖಲೆಗಳನ್ನು ಪರಿಶೀಲಿಸಿದ ನಂತರ, ಅಭ್ಯರ್ಥಿಗಳು ಸ್ಥಳದಲ್ಲೇ ತಮ್ಮ ತಮ್ಮ ಎಲ್ಲಾ ಮೂಲ ದಾಖಲೆಗಳನ್ನು ಕೇಳಿ ಹಿಂಪಡೆದುಕೊಳ್ಳುವುದು. ಅಭ್ಯರ್ಥಿಗಳ ಯಾವುದೇ ಮೂಲ ದಾಖಲೆಗಳಿಗೆ ಈ ಕಛೇರಿಯು ಜವಾಬ್ದಾರಿಯಾಗಿರುವುದಿಲ್ಲ.

14. ಅಭ್ಯರ್ಥಿಗಳು ಒಮ್ಮೆ ಆಯ್ಕೆ ಮಾಡಿಕೊಳ್ಳುವ ಪರೀಕ್ಷಾ ಪೂರ್ವ ತರಬೇತಿ/ತರಬೇತಿ ಕೇಂದ್ರವನ್ನು ಬದಲಾಯಿಸಲು ಹಾಗೂ ಅಭ್ಯರ್ಥಿಗಳು ಪರಸ್ಪರ ಪರೀಕ್ಷಾ ಪೂರ್ವ ತರಬೇತಿ/ತರಬೇತಿ ಕೇಂದ್ರವನ್ನು ಬದಲಾವಣೆ ಮಾಡಿಕೊಳ್ಳಲು ಅವಕಾಶವಿರುವುದಿಲ್ಲ.

15. ಮೂಲ ದಾಖಲೆಗಳ ಪರಿಶೀಲನೆಯ ಸಂದರ್ಭದಲ್ಲಿ ಅಭ್ಯರ್ಥಿಗಳು ನೀಡುವ ದಾಖಲೆಗಳ ಒಂದು ಸೆಟ್ ದೃಢೀಕೃತ ಜೆರಾಕ್ಸ್ ಪ್ರತಿಯನ್ನು ಯಾವುದೇ ಕಾರಣಕ್ಕೂ ಅಭ್ಯರ್ಥಿಗಳಿಗೆ ಹಿಂದಿರುಗಿಸಲಾಗುವುದಿಲ್ಲ.

16. ಇಲಾಖೆಯಿಂದ ನಂತರ ಕರೆಯುವ ಯಾವುದೇ ಮೂಲ ದಾಖಲೆಗಳ ಪರಿಶೀಲನೆಗೆ ಅಭ್ಯರ್ಥಿಗಳು ಹಾಜರಾದಲ್ಲಿ, ಅಂತಹ ಅಭ್ಯರ್ಥಿಗಳು ದಾಖಲೆಗಳ ಒಂದು ಸೆಟ್ ದೃಢೀಕೃತ ಜೆರಾಕ್ಸ್ ಪ್ರತಿಯನ್ನು ಪುನಃ ಇಲಾಖೆಗೆ ಸಲ್ಲಿಸುವುದು.

17. <u>ಇತರೆ ವಿವರಗಳು:</u>

a) ಮೂಲ ದಾಖಲೆಗಳ ಪರಿಶೀಲನೆ/ಕೌನ್ಸಿಲಿಂಗ್‌ಗೆ ಹಾಜರಾಗುವ ಅಭ್ಯರ್ಥಿಗಳಿಗೆ ಪ್ರಯಾಣ ಹಾಗೂ ಇನ್ನಿತರ ಯಾವುದೇ ಭತ್ಯೆಗಳನ್ನು ನೀಡಲಾಗುವುದಿಲ್ಲ.

b) ತರಬೇತಿ ಸಂಸ್ಥೆಗಳು, ತರಬೇತಿ ಸಂಸ್ಥೆಗಳಿಗೆ ನಿಗದಿಪಡಿಸಿರುವ ಸ್ಥಾನಗಳು ಹಾಗೂ ಇಲಾಖೆಯಿಂದ ತರಬೇತಿ ಅವಧಿಗೆ ನೀಡಲಾಗುವ ಮಾಸಿಕ ತರಬೇತಿ ಭತ್ಯೆಯ ವಿವರ ಈ ಕೆಳಗಿನಂತಿದೆ.

| ಕ್ರ ಸಂ. | ಐ.ಎ.ಎಸ್. ತರಬೇತಿ ಸಂಸ್ಥೆಯ ಹೆಸರು | ಮಾಸಿಕ ತರಬೇತಿ ಭತ್ಯೆ (ರೂ.ಗಳಲ್ಲಿ) | ತರಬೇತಿ ಅವಧಿ |
|---|---|---|---|
| 1 | ವಾಜಿರಾಂ & ರವಿ, ನವದೆಹಲಿ | 10000 | ಕನಿಷ್ಠ 7 ರಿಂದ ಗರಿಷ್ಠ 9 ತಿಂಗಳು |
| 2 | ಆಲ್ಟರ್ನೇಟಿವ್ ಲರ್ನಿಂಗ್ ಸಿಸ್ಟಮ್ಸ್ ಪ್ರೈ.ಲಿ.ನವದೆಹಲಿ | | |
| 3 | ಶ್ರೀರಾಮ್ಸ್ ಐಎಎಸ್, ನವದೆಹಲಿ | | |
| 4 | ಬ್ರೈನ್ ಟ್ರೀ, ಹೈದರಾಬಾದ್ | 8000 | |
| 5 | ಆರ್.ಸಿ.ರೆಡ್ಡಿ ಐಎಎಸ್ ಸ್ಟಡಿ ಸರ್ಕಲ್, ಹೈದರಾಬಾದ್ | | |
| 6 | ಯೂನಿವರ್ಸಲ್ ಕೋಚಿಂಗ್ ಸೆಂಟರ್, ಬೆಂಗಳೂರು | ಸಂಸ್ಥೆ ಇರುವ ಸ್ಥಳಕ್ಕೆ ಸಂಬಂಧಿಸಿದಂತೆ ಸ್ಥಳೀಯ ಜಿಲ್ಲೆಯ ಅಭ್ಯರ್ಥಿಗಳಿಗೆ 4000 ಮತ್ತು ಹೊರ ಜಿಲ್ಲೆಗಳ ಅಭ್ಯರ್ಥಿಗಳಿಗೆ 6000 | |
| 7 | ಸ್ಪರ್ಧಾ ಚೈತ್ರ, ಬೆಂಗಳೂರು | | |
| 8 | ಜಿನೇಂದ್ರ ಇನ್ಸ್‌ಟಿಟ್ಯೂಟ್ ಆಫ್ ಕಾಂಪಿಟೇಟಿವ್ ಎಗ್ಸಾಮ್ಸ್ (JICE), ಬೆಂಗಳೂರು | | |

| ಕ್ರ. ಸಂ. | ಕೆ.ಎ.ಎಸ್. ತರಬೇತಿ ಸಂಸ್ಥೆಗಳು | ಮಾಸಿಕ ತರಬೇತಿ ಭತ್ಯೆ | ತರಬೇತಿ ಅವಧಿ |
|---|---|---|---|
| 1 | Karnataka Classic Education Pvt. Ltd. Dharwad | ತರಬೇತಿ ಸಂಸ್ಥೆ ಇರುವ ಸ್ಥಳೀಯ ಜಿಲ್ಲೆಯ ಅಭ್ಯರ್ಥಿಗಳಿಗೆ ರೂ.4000/- ಮತ್ತು ಹೊರ ಜಿಲ್ಲೆಗಳ ಅಭ್ಯರ್ಥಿಗಳಿಗೆ ರೂ.6000/- | 7 ತಿಂಗಳು |
| 2 | Kabbur Education Society (R), Winners Career Academy, Davanagere | | |
| 3 | Spardha Chaitra, Bangalore | | |
| 4 | Consortium Minorities Association, Belagavi | | |
| 5 | Priyadarshini Charitable and Educational Trust (Jnanagangothri competitive exam coaching centre) Bangalore | | |
| 6 | ICS Institute for Competitive examinations, Dharwad | | |
| 7 | Universal coaching centre, Bangalore | | |
| 8 | Spardha Mithra, Bangalore | | |
| 9 | JICE (Jinendra Institute of Competitive Exams) Academy for Excellecnce Pvt. Ltd, Bangalore | | |

18. <u>ಅಂತಿಮವಾಗಿ ಆಯ್ಕೆಯಾದ ಅಭ್ಯರ್ಥಿಗಳಿಗೆ:</u>

a. ತರಬೇತಿ ಸಂಸ್ಥೆಗಳಿಗೆ ನಿಯೋಜಿಸಲ್ಪಟ್ಟ ಅಭ್ಯರ್ಥಿಗಳಿಗೆ ಐ.ಎ.ಎಸ್./ಕೆ.ಎ.ಎಸ್. ಪರೀಕ್ಷೆಗೆ ಸಂಬಂಧಿಸಿದಂತೆ ಪೂರ್ವಭಾವಿ ಮತ್ತು ಮುಖ್ಯ ಪರೀಕ್ಷೆ ಹಾಗೂ ಒಂದು ಐಚ್ಛಿಕ ವಿಷಯವನ್ನು ಒಳಗೊಂಡಂತೆ ಸಮಗ್ರ ತರಬೇತಿಯನ್ನು ನೀಡಲಾಗುವುದು.

b. ಮೇಲ್ಕಂಡ ಸಂಸ್ಥೆಗಳು ಅಭ್ಯರ್ಥಿ ಇಚ್ಛಿಸುವ ಯಾವುದಾದರು ಐಚ್ಛಿಕ ವಿಷಯ (optional subject) ವನ್ನು ಬೋಧಿಸಲು ಆಗದಿದ್ದ ಸಂದರ್ಭದಲ್ಲಿ, ಅಭ್ಯರ್ಥಿಗಳು ತಾವೇ ಖುದ್ದು ಆ ವಿಷಯದ ಬಗ್ಗೆ ಸಿದ್ಧತೆಯನ್ನು ನಡೆಸಬೇಕು. ಬೇರೆ ಯಾವುದೇ ಸಂಸ್ಥೆಯಿದ ಇಲಾಖೆಯು ಅಂತಹ ಐಚ್ಛಿಕ ವಿಷಯದ ತರಬೇತಿ ವ್ಯವಸ್ಥೆಯನ್ನು ಮಾಡಲು ಅವಕಾಶವಿರುವುದಿಲ್ಲ.

c. ಅಭ್ಯರ್ಥಿಯು ತರಬೇತಿಯನ್ನು ಪೂರ್ಣಗೊಳಿಸದೇ ಯಾವುದೇ ಸಂದರ್ಭದಲ್ಲಿ ಮೊಟಕುಗೊಳಿಸಿದಲ್ಲಿ, ಅಂತಹ ಅಭ್ಯರ್ಥಿಗಳಿಂದ ಅವರ ತರಬೇತಿಗೆ ಸರ್ಕಾರ ಭರಿಸಿರುವ ಪೂರ್ಣ ವೆಚ್ಚವನ್ನು ವಸೂಲಿ ಮಾಡಲಾಗುವುದು.

d. ಅಭ್ಯರ್ಥಿಗಳು ಒಂದು ತಿಂಗಳ ತರಬೇತಿಯ ಅವಧಿಯಲ್ಲಿ 3 ದಿನಗಳಿಗಿಂತ ಹೆಚ್ಚಿನ ಅವಧಿಗೆ ಗೈರು–ಹಾಜರಾದಲ್ಲಿ, ಆ ಅವಧಿಗೆ ತರಬೇತಿ ಭತ್ಯೆಯನ್ನು ಕಡಿತಗೊಳಿಸಲಾಗುವುದು. ಸಂಸ್ಥೆಯಲ್ಲಿ ಬಯೋಮೆಟ್ರಿಕ್ ಹಾಜರಾತಿಯನ್ನು ನಿರ್ವಹಿಸಲಾಗುವುದು.

e. ಐ.ಎ.ಎಸ್. ತರಬೇತಿಗೆ ಆಯ್ಕೆಯಾಗುವ ಅಭ್ಯರ್ಥಿಗಳಿಗೆ ಮಾತ್ರ – ಅಂತಿಮವಾಗಿ ತರಬೇತಿಗೆ ಆಯ್ಕೆಯಾದ ಅಭ್ಯರ್ಥಿಗಳು, ನಿಯೋಜಿಸಲ್ಪಟ್ಟ ತರಬೇತಿ ಸಂಸ್ಥೆಗೆ ಒಂದು ಬಾರಿ ಹೋಗಿ ಬರಲು

ದ್ವಿತೀಯ ದರ್ಜೆ (ಸ್ಲೀಪರ್) ರೈಲ್ವೇ ಪ್ರಯಾಣ ವೆಚ್ಚವನ್ನು ನೀಡಲಾಗುವುದು. ಪ್ರಯಾಣ ಮಾಡಿರುವ ಬಗ್ಗೆ ಅಧಿಕೃತ (original) ಟಿಕೆಟ್‌ಗಳನ್ನು ಅಭ್ಯರ್ಥಿಗಳು ತಮ್ಮಲ್ಲೇ ಸುರಕ್ಷಿತವಾಗಿಟ್ಟುಕೊಂಡು, ಬಳಿಕ ಈ ಕಛೇರಿಗೆ ಸಲ್ಲಿಸಿದಲ್ಲಿ ಪ್ರಯಾಣ ಭತ್ಯೆಯನ್ನು ನಿಯಮಾನುಸಾರ ನೀಡಲಾಗುವುದು.



ಆಯುಕ್ತರು,
ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ
ಬೆಂಗಳೂರು